**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು ದಿನಾಂಕಃ 18-02-2019**

**PW-1**

<u>ಮುಂದುವರಿದ ಮುಖ್ಯ ವಿಚಾರಣೆ</u> ಃ ಶ್ರೀ ಎಚ್ ಎಸ್ ಎಮ್ ವಕೀಲರ ಪರವಾಗಿ ಕುಮಾರಿ ಯು ಎಲ್ ವಕೀಲರಿಂದಃ

**ವಾದಿ ಹಾಜರಿರುತ್ತೇನೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದನ್ನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯ ಮತ್ತು ಸರಿ ಇದ್ದು, ಅವುಗಳನ್ನು ಓದಿ ತಿಳಿದುಕೊಂಡು ಸರಿ ಇದೆ ಎಂದು ತಿಳಿದು ಸಹಿ ಮಾಡಿರುತ್ತೇನೆ ಎಂದು ಪ್ರಮಾಣೀಕರಿಸಿರುತ್ತಾರೆ. ಪಿಡಬ್ಲ್ಯೂ–1 ಎಂದು ವಿಚಾರಿಸಲಾಯಿತು.**

**2.** ದಿಃ **10-04-2014** ರ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ-**1** ಎಂದು, **1** ನೇ ಪ್ರತಿವಾದಿಯ ಮುಂದೆ ವಾದಿಯು ಹಾಜರುಪಡಿಸಿದ ತಕರಾರಿನ ಪ್ರತಿ ಹಾಜರುಪಡಿಸಿದ್ದು, ಅದನ್ನು ತಕರಾರಿಗೆ ಒಳಪಟ್ಟು ನಿಪಿ-**2** ಎಂದು, ವಾದಿ ಉಡುಪಿ ಜಿಲ್ಲಾಧಿಕಾರಿಗಳ ಮತ್ತು ಕಾರ್ಕಳದ ತಹಶೀಲ್ದಾರರಿಗೆ ನೀಡಿದ ಅರ್ಜಿಯ ಪ್ರತಿ ಹಾಜರುಪಡಿಸಿದ್ದು, ಅದನ್ನು ತಕರಾರಿಗೆ ಒಳಪಟ್ಟು ನಿಪಿ-**3** ಎಂದು, **2** ಅಂಚೆ ರಶೀದಿ ರಶೀದಿ ಹಾಜರುಪಡಿಸಿದ್ದು, ನಿಪಿ-**4** ಮತ್ತು **5** ಎಂದು, ದಾವಾ ಎ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಆರ್ ಟಿ ಸಿ ಹಾಜರುಪಡಿಸಿದ್ದು, ನಿಪಿ-**6** ಎಂದು, ದಾವಾ ಬಿ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಆರ್ ಟಿ ಸಿ ಹಾಜರುಪಡಿಸಿದ್ದು, ನಿಪಿ-**7** ಎಂದು, ದಿಃ **15-12-2017** ರಂದು ವಾದಿಯು **1** ನೇ ಪ್ರತಿವಾದಿಗೆ ಸಲ್ಲಿಸಿದ ಆಕ್ಷೇಪಣ ಪತ್ರದ ಪ್ರತಿ ಹಾಜರುಪಡಿಸಿದ್ದು, ನಿಪಿ-**8** ಎಂದು, ದಿಃ **15-12-2017** ರಂದು ವಾದಿಯು ಜಿಲ್ಲಾಧಿಕಾರಿಗಳಿಗೆ ಸಲಿಸ್ಲಸಿದ ಆಕ್ಷೇಪಣ ಪತ್ರದ ಪ್ರತಿ ಹಾಜರುಪಡಿಸಿದ್ದು, ಅದನ್ನು ತಕರಾರಿಗೆ ಒಳಪಟ್ಟು ನಿಪಿ-**9** ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದ ಮೂರು ಫೋಟೋಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-**10** ಎಂದು, ವಾದಪತ್ರದೊಂದಿಗೆ ಸಲ್ಲಿಸಿದ ನಕಾಶೆಯನ್ನು ಹಾಜರುಪಡಿಸಿದ್ದು, ನಿಪಿ**11** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರಃ ಶ್ರೀ ಎಮ್ ಕೆ ವಿ ಕೆ ವಕೀಲರ ಪರವಾಗಿ ಶ್ರೀ ಪಿ ಡಿ ಜೆ ವಕೀಲರು ಸಮಯವನ್ನು ಕೋರಿದ್ದು ಕೋರಿಕೆಯ ಮೇರೆಗೆ ಸಮಯಾವಕಾಶವನ್ನು ನೀಡಲ್ಯಾತು.

ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ. ಸಿ. ನ್ಯಾಯಾಧೀಶರು ಮತ್ತು ಪ್ರದನ್ಯಾದಂ
ಕಾರ್ಕಳ.